ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾರ್ಚ್ ಮತ್ತು ಏಪ್ರೆಲ್ ತಿಂಗಳಲ್ಲಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸಕಾಲದಲ್ಲಿ ಸಾಕಷ್ಟು ಮಳೆ ಬಾರದಿರುವುದು, ಬೆಳೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಚಾಮರಾಜನಗರ, ಗುಂಡ್ಲುಪೇಟೆ ಕೊಳ್ಳೇಗಾಲ, ನಂಜನಗೂಡು ಮುಂತಾದ ಕೆಲವು ಭಾಗಗಳಲ್ಲಿ ಹೋದ ವರ್ಷ ಸರಿಯಾಗಿ ಮಳೆ ಕಡಮೆಯಾಗಿ ಬೆಳೆಗಳಿಗೆ ತುಂಬಾ ನಷ್ಟವಾಗಿದೆ ಎಂಬುದಾಗಿ ಈ ಮಾನ್ಯ ಸಭೆಯಲ್ಲಿ ಹಿಂದೆಯೇ ಉತ್ತರ ಕೊಟ್ಟಿದೆ. ಈಗಾಗಲೇ ಆ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಈ ತಾಲ್ಲೂಕು ಏರಿಡ್ ಪ್ರದೇಶವಾಗಿರುವುದರಿಂದ ಇಲ್ಲಿ ಕೆರೆ ಕಟ್ಟೆಗಳು ಬೇಕಾಗುತ್ತವೆ ಎಂದು ಪಿ. ಡಬ್ಲ್ಯೂಡಿಯವರು ವಿವರಗಳನ್ನು ಕೊಡುವುದಕ್ಕೆ ಸಾಧ್ಯವೆ?

ಶ್ರೀ ಎಂ. ವಿ. ಕೃಷ್ಣಪ್ಪ.— ಅದು ಈಗಾಗಲೇ ಅವರಿಗೆ ಗೊತ್ತಿದೆ.

Failure of Crops for want of Rains in Bhadravath Taluk.

*Q.—157 Sri T. D. DEVENDRAPPA (Bhadravathi).—

Will the Government be pleased to state :—

(*a*) whether it is a fact that crops have failed for want of rains in Bhadravathi taluk last year ;

(*b*) whether it is a fact that the ryots of this taluk have made representations for the remission of the land revenue ;

(*c*) whether they intend to give remission of land revenue ;

(*d*) if so, the number and names of villages in the taluk wherein the remission of land revenue would be granted together with the extent of land ?

A.—Sri M. V. KRISHNAPPA (Minister for Revenue).—

(*a*) Crops under the tank atchakat in Danavadi and Nagoli villages were partly affected for want of sufficient water in the tanks.

(*b*) Yes.

(*c*) and (*d*) The matter is being examined and further action for grant of remission wherever necessary will be taken as per rules.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಸರ್ಕಾರದವರು ನನ್ನ (ಎ)ಪ್ರಶ್ನೆಗೆ ಉತ್ತರವಾಗಿ "ಕೆರೆಗಳಲ್ಲಿ ಸಾಕಷ್ಟು ನೀರಿಲ್ಲದಿದ್ದ ಕಾರಣ ನವರಿ ಕೆರೆಗಳ ಅಚ್ಚುಕಟ್ಟು ಪ್ರದೇಶಗಳಲ್ಲಿನ ಬೆಳೆಗಳಿಗೆ ಸ್ವಲ್ಪ ಮಟ್ಟಿಗೆ ನಷ್ಟವುಂಟಾಗಿದ್ದಿತು" ಎಂದು ಹೇಳಿದ್ದಾರೆ. ಅಂದ ಮೇಲೆ ಅದೇ ತಾಲ್ಲೂಕಿನ ಬೇರೆ ಗ್ರಾಮಗಳಲ್ಲಿರತಕ್ಕ ಕೆರೆಗಳಿಗೆ ನೀರು ಹೇಗೆ ಬಂತು ?

ಶ್ರೀ ಎಂ. ವಿ. ಕೃಷ್ಣಪ್ಪ.—ಭದ್ರಾವತಿ ತಾಲ್ಲೂಕು ಒಳ್ಳೆ ಇರ್ರಿಗೇಷನ್ ಏರಿಯಾ ಎಂಬುದು ಮಾನ್ಯ ಸದಸ್ಯರಿಗೇ ಗೊತ್ತಿದೆ. ಭದ್ರಾ left ಮತ್ತು right ಬ್ಯಾಂಕ್ ನಾಲೆಗಳು ಬಂದಮೇಲೆ ಕೆರೆಗಳಿಗೆ ನೀರು ಬಾರದೆ ಇದ್ದರೂ ಭದ್ರಾ ಕೆರೆ ತುಂಬಿ overflow ಆಗಿ ಅಲ್ಲಿ ಬಹಳ ಮಟ್ಟಿಗೆ ಇರ್ರಿಗೇಷನ್ ಸಕ್ಸೆಸ್‌ಫುಲ್ಲಾಗಿ ನಡೆಯುತ್ತಿದೆ. ಮಳೆ ಅಷ್ಟೇನೂ failure ಆಗಿಲ್ಲ ಸ್ವಲ್ಪಮಟ್ಟಿಗೆ ಅಭಾವ ಪರಿಸ್ಥಿತಿ ಇದೆ. ಆದರೆ ಊರಿನ ಮುಂದೆ ಇರತಕ್ಕ ಕೆರೆಯೇನೋ ಸಾಕಷ್ಟು ತುಂಬಿದೆ. ಬೆಳೆಗಳಿಗೆ ಕೊಂಚಮಟ್ಟಿಗೆ ನಷ್ಟವುಂಟಾಗಿದೆ. ತಾಲ್ಲೂಕಿನ ಎರ್ಲಾ ಭಾಗದಲ್ಲೂ ಆ ರೀತಿಯೇನೋ ಇಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನೀರಿನ ಸೌಕರ್ಯ ಸಾಕಷ್ಟು ಇಲ್ಲದೆ ತಾಲ್ಲೂಕಿನ ಇನ್ನೂ ಕೆಲವು ಗ್ರಾಮಗಳಲ್ಲಿ ಬೆಳೆಗಳಿಗೆ ಬಹಳ ನಷ್ಟವಾಗುತ್ತಿರುವುದರಿಂದ ಚಾನಲ್ ಇಲ್ಲದಂತಹ ಯಾವ ಯಾವ ಗ್ರಾಮಗಳಲ್ಲಿ ಸರ್ಕಾರದವರು ಕಂದಾಯವನ್ನು ವಜಾಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—(ಎ) ಪ್ರಶ್ನೆಗೆ ಉತ್ತರವಾಗಿ ಹೇಳಿರುವ ಪ್ರಕಾರ, 300 ಎಕರೆ ಚಿಲ್ಲರೆ ಭೂಮಿಯಲ್ಲಿ ಬೆಳೆ ನಷ್ಟವಾಗಿದೆ. ಆದರೆ ಪಹಣಿ ರೆಜಿಸ್ಟರಿನ ಪ್ರಕಾರ ಇದನ್ನು ನೋಡಬೇಕಾಗಿದೆ. 4 ಆಣೆ 6 ಆಣೆಗಿಂತ ಬೆಳೆ ಕಡಮೆ ಇದ್ದರೆ ಸರ್ಕಾರದವರು ಖಂಡಿತವಾಗಿ ಅಂತಹ ಪ್ರದೇಶಗಳಲ್ಲಿ ರೆಮಿಷನ್ ಕೊಡುವುದಕ್ಕೆ ಏರ್ಪಾಡು ಮಾಡುತ್ತಾರೆ.

ಶ್ರೀ ಟಿ. ಎಚ್. ಮಾದಪ್ಪಗೌಡ.—ಪಹಣಿ ಬರೆಯುವುದು ಯಾವಾಗ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರಾರಂಭದಲ್ಲಿ ಬತ್ತನೆಯಾದಾಗ. ರಾಗಿ, ಬತ್ತದ ಬೆಳೆ ಎಕರೇಜ್ ಎಷ್ಟು ಆಗಿದೆಯೆಂಬುದನ್ನು ಶ್ಯಾನುಭೋಗನು ಬರೆಯುತ್ತಾನೆ. ದಿಟ್ಟಂ ಜಮಾಬಂದಿ ದಸರಾ ಟೈಮನಲ್ಲಿ ನಡೆಯುತ್ತದೆ. ಆಗ ಪಹಣಿ ಚಕ್ ಮಾಡುತ್ತಾರೆ. ಷೇಕ್‌ದಾರರು ಮತ್ತು ಅಮರ್ದಾರರು ಹೋಬಳಿ ಮತ್ತು ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಒಂದು ದೊಡ್ಡ ಗುಡಿ ಇರುವ ಕಡೆ ಕುಳಿತುಕೊಂಡು ಎಲ್ಲವನ್ನೂ ರೆಖ್ಯಾಚಾರ ಮಾಡುತ್ತಾರೆ. ಬೆಳೆಗಳ ರೆಜಿಸ್ಟರನ್ನು ಡಿಸೆಂಬರ್ ತಿಂಗಳಿನಲ್ಲಿ ಮಾಡಿ ಆಕ್ಯುಯರ್ಟಾಗಿ ಇಷ್ಟೇ ಬೆಳೆ ಬಂದಿದೆ ಎಂಬುದಾಗಿ ಅಲ್ಲಿಯೇ ಫೈನಲೈಜ್ ಮಾಡುತ್ತಾರೆ. harvest time ನಲ್ಲಿ ದಿಟ್ಟಂ ಜಮಾಬಂದಿ ಮಾಡುವುದೂ ಉಂಟು.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಜಮೀನುಗಳನ್ನೇ ಹರಾಜುಪಡಿಸಿರೆ ಮಾಡುವವರ ಬಗ್ಗೆ ಏನು ಆದೇಶವನ್ನು ಕೊಡುತ್ತಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ವಸೂಲಿಕಾರ್ಯ ಚೆನ್ನಾಗಿ ನಡೆಯುವುದಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದು ಬೇರೆ ಗ್ರಾಮಗಳಿಗೆ ಸಂಬಂಧಪಟ್ಟುದು ಎಂದು ಕಾಣುತ್ತದೆ. ಒಂದು ವೇಳೆ ವಸೂಲಿ ನಡೆಯದಿದ್ದರೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಳೆ ಬೆಳೆಯಾಗದಿದ್ದರೂ ಸುಳ್ಳು ಪಹಣಿ ಬರೆದರೆ ಅದಕ್ಕೆ ಏನು ಶಿಕ್ಷೆ ಕೊಡುತ್ತೀರಿ ಮತ್ತು ಅದಕ್ಕೆ ಶಿಕ್ಷೆ ಕೊಡುವವರು ಯಾರು?

Mr. SPEAKER.—It is purely hypothetical.

Smt. K. S. NAGARATHNAMMA.—I am ready to prove it.

ಶ್ರೀ ಎಂ. ವಿ. ಕೃಷ್ಣಪ್ಪ.—ಹಿಂದೆ ಸಾಕಷ್ಟು ಉತ್ಪತ್ತಿಯಾಗದಿದ್ದರೆ ಮಳೆ ಬರಲಿ ಬಾರದೆ ಇರಲಿ, ಆಗಾಗ್ಗೆ ರೈತರಿಗೆ ಬರುವ ಉತ್ಪತ್ತಿಯಲ್ಲಿ ಶೇಕಡ 10 ಭಾಗವನ್ನು ಸರ್ಕಾರಕ್ಕೆ ಕೊಡಬೇಕೆಂಬ ಆದೇಶವಿತ್ತು. ಇದರಿಂದ ಅವರಿಗೆ ತೊಂದರೆಯಾಗುತ್ತಿದ್ದಿತು. ಈಗ ಆ ಆದೇಶವನ್ನು ಕೊಡುತ್ತಾ ಇಲ್ಲ. ಏಕೆಂದರೆ ರೈತರ ಮಕ್ಕಳೇ ಮಂತ್ರಿಯಾಗಿರುತ್ತಾರೆ.

ಶ್ರೀ ಎಸ್. ಭೀಮಣ್ಣ.—ಯಾವ ಭಾಗದಲ್ಲಿ ಪಹಣಿ ಬರೆಯುತ್ತಾರೆ? ಹಳೆಯ ಮೈಸೂರಿನಲ್ಲೋ ಅಥವಾ ಹೊಸ ಮೈಸೂರಿನಲ್ಲೋ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರ ಕ್ಷೇತ್ರದ ಕಡೆಯಲ್ಲಿ ಎಷ್ಟೋ ಸಾರಿ ಬರೆಯುತ್ತಾರೆ.

ಶ್ರೀ ಎನ್. ಶಿವಪ್ಪ.—ದೇಶದಲ್ಲಿ ಆಹಾರೋತ್ಪತ್ತಿ ಹಿಂದಿನ ಕಾಲಕ್ಕಿಂತಲೂ ಈಗ ಬಹಳ ಕಡಮೆ ಇರುವುದರಿಂದ ಬಡ ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ಕಂದಾಯವನ್ನು ವಜಾ ಮಾಡುವ ವಿಷಯವನ್ನು ಮಾನ್ಯ ಕಂದಾಯ ಮಂತ್ರಿಗಳು ಪರಿಶೀಲನೆಮಾಡುತ್ತಾರೆಯೇ?

Sri M. V. KRISHNAPPA.—We may call it by some other name, but we cannot totally remove it.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತುಮಕೂರು ಜಿಲ್ಲಾಧಿಕಾರಿಗಳು, ಶ್ಯಾನುಭೋಗ ಮತ್ತು ಷೇಕ್‌ದಾರರು ಹುಜೂರು ಜಮಾಬಂದಿಯ ಬಗ್ಗೆ ಪಹಣಿ ಬರೆಯುವಾಗ 4 ಆಣೆಗಿಂತ ಕಡಮೆ ಉತ್ಪತ್ತಿ ಬಂದಿರುವುದನ್ನೆಲ್ಲಾ ರಿವೈಜ್‌ಮಾಡಿ ಬರೆಯದೇ ಹೋದರೆ ಸಸ್ಪೆಂಡ್ ಮಾಡುತ್ತೇವೆಂದು ಅವರನ್ನು ಹೆದರಿಸಿ ಹೊಸದಾಗಿ ಪಹಣಿ ರೆಕ್ಕಗಳನ್ನು ಬರೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ, ವಿಚಾರ ಮಾಡುತ್ತೇನೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕೆಲವು ಕಡೆ 6 ಆಣೆಗಿಂತ ಕಡಮೆ ಉತ್ಪತ್ತಿ ಬರೆದರೆ ಪೋಟಗೆ ಕೊಡುವುದಿಲ್ಲವೆಂದು ಹೆದರಿಸಿ ಅವರು 4 ಸಾರಿ ಬರೆದಂತಹ ಪಹಣಿ ರೆಜಿಸ್ಟರುಗಳನ್ನು ಪುನಃ ಬರೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ನಮ್ಮ ಗಮನಕ್ಕೆ ಬಂದಿಲ್ಲ.

9-00 A.M.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನಾನು ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ, ಹೊಳೆ ಹೊನ್ನೂರು ಹೋಬಳಿ ಮತ್ತು ಭದ್ರಾವತಿಯ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಮಳೆ ಬಾರದೆ ಪೂರ್ತಿ ಬೆಳೆಯಾಗದೆ ಅಲ್ಲಿನ ಜನಗಳಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಆ ಬಗ್ಗೆ ಪುನಃ ಪರಿಶೀಲನೆ ಮಾಡಿ ಆ ಭಾಗದ ರೈತರುಗಳಿಗೆ ಭೂಕಂದಾಯವನ್ನು ವಜಾ ಮಾಡುವುದಕ್ಕೆ ತಾವು ಭರವಸೆಯನ್ನು ಕೊಡಬಲ್ಲರಾ ?

ಶ್ರೀ ಎಂ ವಿ. ಕೃಷ್ಣಪ್ಪ.—ಅದನ್ನು ವಿಚಾರಮಾಡುತ್ತೇನೆ.

Payment of Salary and T. A. to the Employees working in Fisheries Department in North Kanara District.

*Q.—27. Sri B. P. KADAM (Karwar).—

Will the Government be pleased to state :—

(*a*) whether it is a fact that a large number of employees in the Fisheries Department in the North Kanara District are not paid their pay and T.A. for the last so many months ;

(*b*) if so, what is the total number of such employees and the pay due to each and for how many months it is not paid ;

(*c*) The reasons for the delay in payment ;

(*d*) whether it is a fact that these employees had represented to Government to expedite their payment as they are hard pressed ;

(*e*) The decision taken by them in the matter ?

A.— Sri B. RACHAIAH (Minister for Forests and Fisheries).—

(*a*) No. Only 5 cases are to be settled.

(*b*) 5.

(i) Leave salary of one official for 5 months amounting Rs. 348.
(ii) T. A. of 3 officials for 9 months amount to Rs. 100.
(iii) T. A. of one official for 3 months amount to Rs. 30.

(*c*) (1) Sanctioning leave for extended period.
(2) Omissions on the part of officials to furnish correct particulars.
(3) Claims being made too late with the result that the condonation of delay involving procedural delay being inevitable.

(*d*) Yes. By only one out of these Five.

(*e*) The claims are being settled expeditiously.

Sri B. P. KADAM.—Is it a fact that some officer who was formerly working in the port building yard at Karwar has not been paid his salary for nearly 8 to 9 months?

Mr. SPEAKER.—It has been answered.

Sri B. P. KADAM.—Does that pertain to this official ?

Sri B. RACHAIAH.—Yes.